International Journal of Leading Research Publication (IJLRP)

E-ISSN: 2582-8010 ● Website: www.ijlrp.com ● Email: editor@ijlrp.com

# ವೇದಾವತಿ ನದಿತೀರದ ಜನಪದರ ದೈವಿಕ ಮತ್ತು ಸಾಂಪ್ರದಾಯಿಕ ಆಚರಣೆಗಳು

**ಡಾ. ಜಗನ್ನಾಥ ಎನ್**

ಸಹ ಪ್ರಾಧ್ಯಾಪಕರು

ಕನ್ನಡ ವಿಭಾಗ

ಹೆಚ್ ಪಿ ಪಿ ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

ಚಿತ್ರದುರ್ಗ ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ.

**ಲೇಖನ ಸಾರಾಂಶ:**

ವೇದಾವತಿ ನದಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಕಲೆಯಿಂದ ಸಾಹಿತ್ಯದವರೆಗೆ ಮತ್ತು ಜಾನಪದ ಕಥೆಗಳಿಂದ ರಾಜಕೀಯದವರೆಗೆ ಆರ್ಥಿಕತೆ ಮತ್ತು ಸಾಮಾಜಿಕ ಅಂಶಗಳು ಎಲ್ಲವೂ ಅಗತ್ಯವಿರುವಂತೆ ಬೆಳೆದಿವೆ. ಒಂದು ಸ್ಥಳದ ಭೌಗೋಳಿಕ ಲಕ್ಷಣಗಳನ್ನು ನೋಡುವ ಮೂಲಕ ಸ್ಥಳೀಯ ದಂತಕಥೆಗಳು ಅಸ್ತಿತ್ವಕ್ಕೆ ಬಂದಿವೆ. ಈ ಕಥೆಗಳು ಸ್ಥಳದ ಶ್ರೇಷ್ಠತೆ, ಜನರ ಗುಣಗಳು, ಸಂಪ್ರದಾಯಗಳು ಮತ್ತು ಘಟನೆಗಳ ಬಗ್ಗೆ ಮಾತನಾಡುತ್ತವೆ. ಚಿಕ್ಕದಾಗಿ ಮತ್ತು ಗದ್ಯದಲ್ಲಿ ಬರೆಯಲಾದ ಈ ಸ್ಥಳೀಯ ದಂತಕಥೆಗಳು ಒಂದು ಸ್ಥಳಕ್ಕೆ ಸಂಬಂಧಿಸಿವೆ. ವ್ಯಕ್ತಿಗಳಿಗೆ ಸ್ಥಳವು ಬಹಳ ಮುಖ್ಯವಾಗಿದೆ.. ಈ ಕಥೆಗಳು ಮೊದಲು ಯಾವಾಗ ಪ್ರಾರಂಭವಾದವು ಎಂದು ಹೇಳುವುದು ಕಷ್ಟ. ನಾವು ಸ್ಥಳ ಮತ್ತು ಅದರ ಸುತ್ತಲಿನ ಪ್ರದೇಶದ ಬಗ್ಗೆ ಮಾತ್ರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಪ್ರಸ್ತುತ ಲೇಖನವು ವೇದಾವತಿ ನದಿತೀರದ ಜನಪದ ನಂಬಿಕೆ ದೈವಿಕ ಆಚರಣೆ ಮತ್ತು ಸಾಂಪ್ರದಾಯಿಕ ಆಚರಣೆಗಳು ಕುರಿತಾಗಿ ತಿಳಿಸುತ್ತದೆ.

**ಪ್ರಮುಖ ಪದಗಳು:** ವೇದಾವತಿ ನದಿ, ಪೂಜೆ, ಆಚರಣೆ, ಸಾಂಪ್ರದಾಯಿಕ, ಜನರ ಗುಣಗಳು

**ಪೀಠಿಕೆ:**

ಮಾನವ ಶಿಲಾಯುಗದ ಸಂದರ್ಭದಲ್ಲಿ ಬದುಕಿಗಾಗಿ ನಿರಂತರವಾಗಿ ಪ್ರಕೃತಿಯೊಡನೆ ಸೆಣಸಾಡಬೇಕಿತ್ತು. ಆಹಾರಕ್ಕಾಗಿ ಅಲೆದಾಡುವಾಗ ಪ್ರಾಣಿಗಳನ್ನು ಎದುರಿಸುವ ಪರಿಸ್ಥಿತಿ ಅವನು ಸದಾ ಜಾಗರೂಕನಾಗಿರುವಂತೆ ಮಾಡಿತ್ತು. ಅದರ ಜೊತೆಗೆ ಪ್ರಕೃತಿ ಅವನಲ್ಲಿ ಭೀತಿ ಮತ್ತು ಆಶ್ಚರ್ಯಗಳನ್ನು ಉಂಟುಮಾಡಿತು. ಆದಿಮಾನವ ಮಳೆ, ಗುಡುಗು, ಸಿಡಿಲು, ಕಾಡ್ಗಿಚ್ಚುಗಳನ್ನು ನಿಸರ್ಗ ನಿಯಮಗಳು ಎಂಬುದನ್ನರಿಯದ ಕಾರಣ ಅವನಲ್ಲಿ ಅವು ಭೀತಿಯನ್ನು ಮೂಡಿಸಿದವು ನಿಸರ್ಗದಲ್ಲಿ ಎಲ್ಲಕಿಂತಲೂ ಮಿಗಿಲಾದ ಅದ್ಭುತ ಶಕ್ತಿ-ದೇವರು ಇದೆ ಎಂದು ನಂಬಿದನು. ಜೊತೆಗೆ ಆ ನಿಸರ್ಗದ ರಹಸ್ಯಗಳನ್ನು ಅರಿಯುವ ಕುತುಹಲವೂ ಉಂಟಾಯಿತು. ಮತ್ತು ಅವು ಪವಿತ್ರ, ಪೂಜಾರ್ಹ ಎಂಬ ಭಾವನೆಯು ಬೆಳೆಯಿತು. ಆ ನಿಸರ್ಗ ಶಕ್ತಿಗಳನ್ನು ಒಲಿಸಿಕೊಳ್ಳಬೇಕಾದರೆ ಅದನ್ನು ಆರಾಧಿಸಬೇಕು ಎಂದು

ಮತ್ತು ತಾನು ಸಾಧಿಸಬೇಕಾದ ಕಾರ್ಯಗಳಿಗೆ ಇಂತಹ ಶಕ್ತಿಗಳ ಬೆಂಬಲ, ಆಶೀರ್ವಾದ ಅವಶ್ಯವೆಂದು ಭಾವಿಸಿದ ಕಾರಣ ಆ ಶಕ್ತಿಗೆ ಒಂದು ರೂಪನೀಡಿ ಅದನ್ನು ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿ ಆರಂಭವಾಯಿತು. ನಮ್ಮ ದೇಶದ ಪ್ರಾಚೀನ ನಾಗರೀಕತೆ◌ಿಯಾದ ಸಿಂಧೂ ಬಯಲಿನ ನಾಗರೀಕತೆÉಯ ಜನರು ಇತರೆ ದೇವರುಗಳ ಜೊತೆಗೆ ಮುಖ್ಯವಾಗಿ ಮಾತೃದೇವತೆಯನ್ನು ಸಹಾ ಆರಾಧಿಸುತ್ತಿದ್ದರೆಂದು ಪುರಾತತ್ವಶಾಸ್ತ್ರಜ್ಞರಾದ ಶುಭಾಂಗಣಾ ಅತ್ರೆಯವರು ಹೇಳುತ್ತಾರೆ. ಅದಕ್ಕೆ ಅವರು ಅಲ್ಲಿ ದೊರೆತ ಮುದ್ರೆಗಳಲ್ಲಿನ ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ವಾದಿಸಿದ್ದಾರೆ."ಳ ನಮ್ಮ ಜನಪದರು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕೆಲ ನಗರಗಳಲ್ಲಿ ಇಂದಿಗೂ ಶಕ್ತಿ ದೇವತೆಗಳು ಜನರನ್ನು ಸಂರಕ್ಷಿಸುವ ತಾಯಿದೇವರ ಪ್ರತೀಕಗಳೆಂದು ತಿಳಿದು ಅವುಗಳನ್ನು ಮಾರಿಅಥವಾ ಮಾರಮ್ಮ, ಹುರಿಯಮ್ಮ, ಇರಿಚಿನ್ನಮ್ಮ ಇತ್ಯಾದಿ ಹೆಸರುಗಳಿಂದ ಕರೆಯುವುದರ ಜೊತೆಗೆ ಕರಾರುವಕ್ಕಾದ ಆರಾಧನೆಯನ್ನು ಹಿಂದಿನಿAದಲೂ ಮಾಡುತ್ತಾ ಬಂದಿದ್ದಾರೆ. ಈ ರೀತಿ ದೈವದ ಕರಾರುವಕ್ಕಾದ ಆರಾಧನೆಯೇ ಸಂಪ್ರದಾಯ ಮತ್ತು ಆಚರಣೆಗಳ ಹುಟ್ಟಿಗೆ ಮೂಲ ಕಾರಣವಾದವು. ಪ್ರಾಯಶಃ ಇದೇ ಹಿನ್ನೆಲೆಯಲ್ಲಿ ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಹಲವು ಆಚರಣೆಗಳನ್ನು ಬೇರೆ-ಬೇರೆ ಕಾರಣ ಹಾಗೂ ನಂಬಿಕೆಗಳ ಹಿನ್ನೆಲೆಯಲ್ಲಿ ಇಂದಿಗೂ ಮುನ್ನೆಡಿಸುತ್ತಾ ಸಂಸ್ಕೃತಿಯ ಪ್ರಸರಣಕ್ಕೆ ಕಾರಣೀಭೂತರಾಗಿದ್ದಾನೆ. ಭಾರತ ಸಂಪ್ರದಾಯಗಳ ತವರೂರು. ಇಲ್ಲಿ ನೆಲೆಸಿರುವ ವಿವಿಧ ಜನಪದರು ತಮ್ಮದೇ ಆದ ನಂಬಿಕೆ, ಆಚರಣೆ ಹಾಗೂ ಸಂಪ್ರದಾಯಗಳನ್ನು ಹೊಂದಿದ್ದಾರೆ. ಇವುಗಳ ಮಧ್ಯೆ ಅವಿನಾಭಾವ ಸಂಬAಧವಿದೆ. ಇಲ್ಲಿ ನೆಲೆಸಿರುವ ವಿವಿಧ ಜನಪದರು ತಮ್ಮದೇ ಆದ ನಂಬಿಕೆ ಮತ್ತು ಆಚರಣೆ ಅಥವಾ ಸಂಪ್ರದಾಯಗಳನ್ನು ತಲತಲಾಂತರದಿAದ ಮಾಡುತ್ತಾ ಬಂದಿದ್ದಾರೆ. ಜನಪದರ ದೃಷ್ಠಿಯಲ್ಲಿ ಇವು ಜೀವನದ ಪ್ರಮುಖ ಭಾಗಗಳಾಗಿವೆ. ಸಂಪ್ರದಾಯದ ತಳಹದಿಯ ಮೇಲೆ ನಂಬಿಕೆ, ನಂಬಿಕೆಯ ತಳಹದಿಯ ಮೇಲೆ ಆಚರಣೆ ನಿಂತಿರುತ್ತದೆ. ಹಬ್ಬಗಳಲ್ಲಿ ಎಡೆ ಇಡುವುದು ಸಂಪ್ರದಾಯ, ಇಟ್ಟ ಹೆಡೆಯನ್ನು ಹಿರಿಯರು ಬಂದು ಸ್ವೀಕರಿಸುತ್ತಾರೆ ಎಂಬುದು ನಂಬಿಕೆ. ಎಡೆಯನ್ನು ಹೇಗೆ ಇಡಬೇಕು ಯಾವ ವಿಧಾನದಿಂದ ಯಾರ ಎಡೆ ಇಡಬೇಕು. ಯಾವ್ಯಾವ ಅಡಿಗೆಗಳನ್ನು ಎಡೆಯಾಗಿ ಬಳಸಬೇಕು ಎನ್ನುವುದು ಆಚರಣೆ.

ಆಚರಣೆಗಳೆಂದರೆ ಆಚರಿಸುವುದು, ಅನುಸರಿಸುವುದು, ಸಂಪ್ರದಾಯದAತೆ ನಡೆಯುವುದು ಎಂದು ಅರ್ಥೈಸಬಹುದು. ಮನುಷ್ಯನು ಅಗೋಚರವಾದ ದೈವಶಕ್ತಿಗಳ ಪ್ರೀತ್ಯಾರ್ಥವಾಗಿ ನಡೆಸುವ ಮತಾಚರಣೆಗಳು ಕರ್ಮ ವಿಧಾನಗಳನ್ನು ಆಚರಣೆಗಳೆಂದು ಕರೆಯುವರು. ಆಚರಣೆಗಳನ್ನು ಪರಂಪರಗತವಾಗಿ ಮುಂದುವರಿಸಿಕೊAಡು ಬಂದಿರುವುದರಿAದ ಇವುಗಳ ಬಗ್ಗೆ ಬಲವಾದ ನಂಬಿಕೆಗಳು ಇರುತ್ತವೆ. ಈ ರೀತಿಯ ಆಚರಣೆಗಳು ಧಾರ್ಮಿಕ ವಲಯದಲ್ಲಿ ಇರುತ್ತವೆ. ಅವರ ಸಾಮಾಜಿಕ ಸ್ಥಿತಿಗೆ ಅನುಗುಣವಾಗಿ ನಡೆಯುತ್ತವೆ. ಜಾನಪದೀಯ ಆಚರಣೆಗಳಲ್ಲಿ ಕೆಲವು ಫಲವಂತಿಕೆಯ ಹಿನ್ನೆಲೆ ಇರುತ್ತದೆ. ಇಂತಹ ನಂಬಿಕೆಗಳು ಸಹಜವಾಗಿ ಮಾನವನಲ್ಲಿ ಕಂಡುಬರುತ್ತವೆ. ಆಚರಣೆಗಳನ್ನು ಮಾನವನ ಬದುಕಿಗೆ ಮತ್ತು ಅತನ ಬಾಹ್ಯ ಪ್ರಪಂಚಕ್ಕೆ ಸಂಬ0ಧಿಸಿದ ಆಚರಣೆಗಳು, ಆರ್ಥಿಕ ಚಟುವಟಿಕೆಗಳಿಗೆ ಸಂಬ0ಧಿಸಿದ ಆಚರಣೆಗಳು, ನೈಸರ್ಗಿಕ ಚಟುವಟಿಕೆಗಳಿಗೆ ಸಂಬAಧಿಸಿದ ಆಚರಣೆಗಳೆಂದು ವಿಭಾಗಿಸಬಹುದು. ದೈವಕ್ಕೆ ಸಂಬAಧಿಸಿದ ಆಚರಣೆಗಳನ್ನು ಜನಪದರು ದಿನಕ್ಕೆ ವಾರಕ್ಕೆ, ವಾರ್ಷಿಕ ದೇವರ ಆರಾಧನೆ ಹಿನ್ನೆಲೆಯಲ್ಲಿ ಆಚರಿಸುತ್ತಾರೆ.

ಇಂತಹ ಸಕಲ ಸಿದ್ಧತೆಗಳಿಂದ ಕೂಡಿದ ಹಬ್ಬ ಹರಿದಿನಗಳು ತಿಥಿ ವಾರ ಅನೇಕ ಆಚರಣೆಗಳಿಗೆ ಆಧಾರಗಳಾಗಿವೆ. ಜನಪದರಿಂದ ಚಾಚು ತಪ್ಪದೇ ಆಚರಿಸುವ ಆಚರಣೆಗಳು ಸಂಸ್ಕೃತಿಯ ಪ್ರಸರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳನ್ನು ವಿವಿಧ ಸಮುದಾಯಗಳ ಜನಪದರು ನಿರ್ದಿಷ್ಟ ಕಾಲಗಳಲ್ಲಿ ನಡೆಸುವ ಹಬ್ಬ, ಜಾತ್ರೆ, ಉತ್ಸವ, ಹರಕೆ, ಕಾಣಿಕೆ, ಮುಡುಪು ಕೊಡುವ ಆಚರಣೆಗಳನ್ನು ನಾವು ಕಾಣಬಹುದಾಗಿದೆ.

**ಅಧ್ಯಯನದ ಉದ್ದೇಶ:**

ಚಿತ್ರದುರ್ಗ ಜಿಲ್ಲೆಯಲ್ಲಿ ಏಕೈಕ ದೊಡ್ಡ ನದಿ ವೇದಾವತಿ ನದಿಯಾಗಿದೆ. ಪ್ರಮುಖವಾಗಿ ಈ ನದಿಗೆ ಹಳ್ಳ ಕೊಳ್ಳಗಳು ಸೇರಿ ನೀರು ಹರಿದು ನದಿಗೆ ಸೇರುತ್ತವೆ. ಈ ನದಿಗೆ ಅಣೆಕಟ್ಟುಗಳು ಪೀಡರ್ ಚಾನಲ್‌ಗಳು ನೀರು ಬರುವುದಕ್ಕೆ ಭದ್ರ ಮೇಲ್ದಂಡೆ ಯೋಜನೆ ತಂದು ಇಲ್ಲಿನ ಜನಪದರ ಕೃಷಿಗೆ ಮಾಡುವುದಕ್ಕೆ ನೀರು ಒದಗಿಸಿರುವುದು ನಂತರ ಪ್ರಮುಖ ಉದ್ದೇವನ್ನು ಕಾಣಲಾಗಿದೆ. ಇಲ್ಲಿ ಅಕ್ಕ ಪಕ್ಕ ಪವಿತ್ರ ದೇವಾಲಯಗಳ ಪ್ರಸಿದ್ಧಿ ಪುಣ್ಯ ಸ್ಥಳಗಳ ಬಗ್ಗೆ ಸಂಶೋಧನೆಗೆ ಒಳಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ವೇದಾವತಿ ನದಿ ತೀರದ ಜನಪದ ಆಚರಣೆಗಳನ್ನು ತಿಳಿಯುವ ಉದ್ದೇಶವನ್ನಿಟ್ಟುಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

೧. ವೇದಾವತಿ ನದಿ ತೀರದ ಪ್ರಮುಖ ಸ್ಥಳಗಳ ಮತ್ತು ಗ್ರಾಮಗಳ ದೈವ-ದೇವಿಯರ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು.

೨. ವೇದಾವತಿ ನದಿ ತೀರದ ಜನರ ಬಗ್ಗೆ ಇದುವರೆಗೆ ನಡೆದಿರುವ ಜನಪದ ಆಚರಣೆ, ಐತಿಹ್ಯ ಹಾಗೂ ಪುರಾಣಗಳನ್ನು ಕುರಿತು ಅಧ್ಯಯನ ಮಾಡುವುದು.

**ಅಧ್ಯಯನದ ವ್ಯಾಪ್ತಿ:**

ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿ ತೀರದ ಜನಪದ ಆಚರಣೆಗಳ ಮೇಲೆ ಹೆಚ್ಚು ಗಮನ ಹರಿಸಬೇಕಾಗಿದ್ದನ್ನ ಈ ಮುಂಚೆ ಇಷ್ಟೇ ಪರಿಧಿಯನ್ನು ನಿರ್ಮಿಸಿಕೊಂಡಿದ್ದು ಅದು ಬಹು ವ್ಯಾಪಕವಾದ ಸ್ಥಳವನ್ನು ತೋರುವುದರಿಂದ ಮಾರ್ಗದರ್ಶಕರ ಮಾರ್ಗದರ್ಶನದ ಮೇರೆಗೆ ಇದೇ ಜಿಲ್ಲೆಯ ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ ಪ್ರದೇಶದ ವೇದಾವತಿ ನದಿ ತೀರದ ಜನಪದರ ಆಚರಣೆಗಳನ್ನು ಅಧ್ಯಯಿನಿಸಬೇಕೆಂದು ನಿರ್ಧರಿಸಿಕೊಂಡು ಸಂಶೋಧನೆಯನ್ನು ಆರಂಭಿಸಲಾಯಿತು. ಮೊದಲ ಹಂತದಲ್ಲಿ ಈ ಆಚರಣೆಯ ನೆಲೆಸುವ ಸ್ಥಳಗಳನ್ನು ಮತ್ತು ಅವರು ಅಲೆಯುವ ಪ್ರದೇಶಗಳ ಸೀಮಿತ ಭಾಗದ ಅಂದಾಜು ಪ್ರದೇಶದ ನಕಾಶೆಯನ್ನು ಸಿದ್ಧಪಡಿಸಿಕೊಳ್ಳಬೇಕಾಯಿತು.

ಚಿತ್ರದುರ್ಗ ಜಿಲ್ಲೆಯನ್ನು ಸಮಗ್ರವಾಗಿ ಹಲವು ತಾಲ್ಲೂಕುಗಳಾಗಿ ವಿಭಾಗಿಸಿದ್ದು ಅದರಲ್ಲಿ ವೇದಾವತಿ ನದಿಯಗೆ ಒಳಪಡುವ ತಾಲ್ಲೂಕುಗಳನ್ನು ಸಂಶೋಧನಾ ವ್ಯಾಪ್ತಿಯಾಗಿ ಅಳವಡಿಸಿಕೊಂಡು ಅಧ್ಯಯನ ಪ್ರಾರಂಭ ಮಾಡಲಾಯಿತು. ಚಿತ್ರದುರ್ಗ ವೇದಾವತಿ ನದಿ ತೀರದ ಜನಪದರ ಆಚರಣೆಗಳಿಗೆ ಕೇವಲ ಚಿತ್ರದುರ್ಗ ಮೂಲ ಪ್ರದೇಶದ ಸಂಕ್ಷಿಪ್ತ ಪರಿಚಯದೊಂದಿಗೆ ಮುಖ್ಯವಾಗಿ ಚಿತ್ರದುರ್ಗ, ಹೊಸದುರ್ಗ, ಚಳ್ಳಕೆರೆ, ಹಿರಿಯೂರು, ಹೊಲ್ಕೆರೆ, ಮೊಳಕಾಲ್ಮೂರು, ಅಬ್ಬಿನಹೊಳೆ, ಆಲೂರು, ಆನೆಸಿದ್ದಿರಿ, ಅಗ್ರಹಾರ, ಇಕ್ಕನೂರು, ಉಪ್ಪಳಗೆರೆ, ರಂಗನಾಥಪುರ, ಕರಿಯಾಲ, ಕತ್ರಿಕೇನಹಳ್ಳಿ, ದೊಡ್ಡಘಟ್ಟ, ಕೂದೂರು, ಕೊನಿಗರಹಳ್ಳಿ, ಲಕ್ಕವ್ವನಹಳ್ಳಿ, ಬೀರನೆಹಳ್ಳಿ, ಕುರುಬರಹಳ್ಳಿ, ತೊರೆಬೇನಳ್ಳಿ, ರಂಗೇನಹಳ್ಳಿ, ಈಶ್ವರಗೆರೆ, ಅಂಬಲಗೆರೆ, ದೊಡ್ಡಘಟ್ಟ, ಪಿಟ್ಲಹಳ್ಳಿ, ಆಲೂರು, ನಂದಿಹಳ್ಳಿ, ಬಿದಿರಕೆರೆ, ಮೈಲಹಳ್ಳಿ, ರಂಗನಾಥಪುರ, ಲಕ್ಕವ್ವನಹಳ್ಳಿ ವಾಣಿವಿಲಾಸಪುರ, ಹಾಲಗೊಂಡನಹಳ್ಳಿ, ಕಲಮರಹಳ್ಳಿ, ಕಮತ್‌ಮರಿಕುಂಟೆ, ಕಾಲುವೆಹಳ್ಳಿ, ಕೋನಿಗರಹಳ್ಳಿ, ನಾರಾಯಣಪುರ, ಕರ್ಲಕುಂಟೆ, ಪರಶುರಾಂಪುರ, ಚೌಳೂರು, ಗುಡಿಹಳ್ಳಿ, ಗೋಸಿಕೆರೆ, ತಿಮ್ಮಣ್ಣನಾಯಕನಕೋಟೆ, ಘಟಪರ್ತಿ, ಚಟ್ಟೆಕಂಬ, ಮತ್ಸಮುದ್ರ, ಚನ್ನಮ್ಮನಾಗತಿಹಳ್ಳಿ, ಜುಂಜರಗುAಟೆ, ಮೀರಾಸಾಬಿಹಳ್ಳಿ, ಚಿಕ್ಕೇನಹಳ್ಳಿ, ಗೋಪನಹಳ್ಳಿ, ತಿಪ್ಪಗೊಂಡನಹಳ್ಳಿ, ಬೂದಿದಿಬ್ಬದಹಳ್ಳಿ, ಮೋದೂರು, ಮೈಲನಹಳ್ಳಿ, ಬೊಮ್ಮನಕುಂಟೆ, ಜಾಜೂರು, ಯಲಕಟ್ಟೆ ಗೊಲ್ಲರಹಟ್ಟಿ, ರೇಣುಕಾಪುರ, ಸೂರನಹಳ್ಳಿ, ಕೂಡ್ಲಹಳ್ಳಿ, ಬ್ಯಾಡರಹಳ್ಳಿ, ಬುಕ್ಕಂಬೂದಿ, ಮತ್ತೋಡು, ಭರಮಗಿರಿ, ಭಟ್ಟರಹಳ್ಳಿ,

ದೇವಸಮುದ್ರ, ಓಬಳಾಪುರ, ತಳವಾರಹಳ್ಳಿ, ಜಾಲಿಗೊಲ್ಲರಹಟ್ಟಿ, ಕಸವಿಗೊಂಡನಹಳ್ಳಿ, ಬಾಗೂರು, ಕಾರೆಹಳ್ಳಿ, ಬೋರನತಿಪ್ಪಡ್ಯಾಂ, ಮುಷ್ಟಗುಮ್ಮಿ, ನಾಗಸಮುದ್ರ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದ್ದೇನೆ.

**ಇದುವರೆಗೂ ನಡೆದ ಅಧ್ಯಯನಗಳ ಅವಲೋಕನ**

ವೇದಾವತಿ ನದಿ ತೀರದ ಜನಪದರು ಕೃಷಿ, ಪಶುಪಾಲನೆ, ಕುರಿಸಾಣಿಕೆಯು ಪರಂಪರೆ ಇಡೀ ಜಗತ್ತನ್ನೇ ಆವರಿಸಿಕೊಂಡಿರುವ ಒಂದು ವಿಶೇಷ ಪರಂಪರೆ, ಭಾರತದಲ್ಲಿ ಪಶುಪಾಲನೆಗೆ ತನ್ನದೇ ಆದ ವಿಶಿಷ್ಟ ಸ್ಥಾನಮಾನವಿದೆ. ಭಾರತದ ಅನೇಕ ಬುಡಕಟ್ಟು ಪಂಗಡಗಳು ಇಂದಿಗೂ ತಮ್ಮ ಮೂಲವೃತ್ತಿಯಾಗಿ ಕೃಷಿ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಪಶುಪಾಲನೆಯನ್ನು ಮುಂದುವರೆಸಿಕೊAಡು ಬಂದಿರುವುದು ಈಗಲೂ ಕಾಣುತ್ತೇವೆ. ಸಿಂಧೂ ಕೊಳ್ಳದ ನಾಗರಿಕತೆ ಯಿಂದಲೂ ನಮಗೆ ಪಶುಪಾಲನೆಯ ಅನೇಕ ಕುರುಹುಗಳು ಕಾಣುತ್ತವೆ. ಅದರಂತೆಯೇ ಕನ್ನಡ ನಾಡಿನಲ್ಲೂ ಕೂಡ ಪಶುಪಾಲನಾ ಪರಂಪರೆಗೆ ದೊಡ್ಡ ಇತಿಹಾಸವೇ ಇದೆ. ಬೇರೆ ಬೇರೆ ಗುಡ್ಡದ ಪ್ರದೇಶಗಳಿಂದ ಬಂದ ಅನೆಕ ಕೃಷಿಕರು, ಪಶುಪಾಲಕರು, ತಮ್ಮ ಮೂಲ ಆಚರಣೆಗಳನ್ನು ಮರೆತು ಕರ್ನಾಟಕದ ವಿವಿಧ ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆರೆಯುತ್ತಾ ಕನ್ನಡಿಗರಾಗಿದ್ದಾರೆ.

ಇಂತಹ ವಿಶಿಷ್ಟ ವೇದಾವತಿಯ ನದಿ ತೀರದ ಜನಪದರ ಆಚರಣೆಗಳ ಕುರಿತು ನಾಡಿನ ಅನೇಕ ಸಂಶೋಧಕರು, ವಿದ್ವಾಂಸರು ಅನೇಕ ಅಧ್ಯಯನಗಳನ್ನು ಮಾಡಿದ್ದಾರೆ. ಕೆಲವರು ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿದರೆ ಇನ್ನೂ ಕೆಲವರು ಒಂದು ಹೆಜ್ಜೆ ಮುಂದೆ ಹೋಗಿ ಕೃತಿಗಳನ್ನು ರಚಿಸಿದ್ದಾರೆ. ಸಂಶೋಧಕ ವಿದ್ವಾಂಸರು ಸಂಪುಟಗಳಾಗುವಷ್ಟು ಮಾಹಿತಿಯನ್ನು ಗ್ರಂಥಭAಡಾರಗಳಲ್ಲಿ ವಿವರರಿಸಿದ್ದಾರೆ.

ಮೀರಾಸಾಬಿಹಳ್ಳಿ ಶಿವಣ್ಣನವರು 'ಕಾಡುಗೊಲ್ಲರ ಸಂಸ್ಕೃತಿ' ಎಂಬ ಕೃತಿಯಲ್ಲಿ ಕರ್ನಾಟಕದ ತಳಸಮುದಾಯಗಳ ಆದ ಕಾಡುಗೊಲ್ಲರು ಮ್ಯಾಸ ಬೇಡರ ಮೇಲೆ ಅತಿ ಹೆಚ್ಚಿನ ಸಂಶೋಧನೆಗಳನ್ನು ಕೈಗೊಂಡಿದ್ದಾರೆ, ಅವರ ಎಲ್ಲಾ ಸಂಶೋಧನಾತ್ಮಕ ಬರಹಗಳು ಮತ್ತು ಕೃತಿಗಳು ತಳಸಮುದಾಯದ ಹಿನ್ನೆಲೆಯಲ್ಲಿ ಇಟ್ಟುಕೊಂಡು ವಿಶೇಷವಾಗಿ ಈ ಕೃತಿಯಲ್ಲಿ ಕಾಡುಗೊಲ್ಲರ ಸಾಂಸ್ಕೃತಿಯನ್ನು ಹಲವಾರು ಆಯಾಮಗಳಲ್ಲಿ ಕಂಡುಕೊAಡಿದ್ದಾರೆ. ಕೃತಿಯ ಆರಂಭದಲ್ಲಿ ಕಾಡುಗೊಲ್ಲರ ಮೂಲವನ್ನು ವಿಶೇಷ ಸಾಂಪ್ರದಾಯದ ಮೂಲಕ್ಕೆ ಅವರ ಪರಂಪರೆಯನ್ನು ಎತ್ತಿ ತೋರಿಸಿದ್ದಾರೆ. ಕಾಡುಗೊಲ್ಲರು ನಾಡನ್ನು ತೊರೆದು ಕಾಡಿನಲ್ಲಿ ವಾಸಿಸುವ ಪರಿಶ್ರಮಗಳು ಅವರ ವಸತಿ ವ್ಯವಸ್ಥೆ ಉಟೋಪಚಾರಗಳು ಧಾರ್ಮಿಕ ಮತ್ತು ಸಾಮಾಜಿಕವಾಗಿರುವ ಆಚರಣೆಗಳು ಇದರಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಕಾಡುಗೊಲ್ಲರ ಆದಿ ದೈವಗಳು ಮತ್ತು ಬುಡಕಟ್ಟು ದೈವಗಳನ್ನು ವಿಶೇಷವಾಗಿ ಅಧ್ಯಯನ ಮಾಡುವುದರ ಮೂಲಕ ಸಮಗ್ರ ಕಾಡುಗೊಲ್ಲರ ದೈವಗಳನ್ನು ಈ ಕೃತಿಯಲ್ಲಿ ಪರಿಚಯಿಸಿದ್ದಾರೆ.

ದೇವೇಂದ್ರ ಕುಮಾರ ಹಕಾರಿ ಇವರು 'ಜನಪದದ ಮೂಲತತ್ವಗಳು' ಎಂಬ ಗ್ರಂಥದಲ್ಲಿ ಜನಪದ ಮೂಲ ತತ್ವಗಳು, ಕೃತಿ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಪಾಶ್ಚಾತ್ಯ ಜನಪದ ಸಿದ್ಧಾಂತಗಳನ್ನು ಅರಗಿಸಿಕೊಂಡು ಅದನ್ನು ಕನ್ನಡದಲ್ಲಿ ಅನಾವರಣಗೊಳಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ. ಹಿನ್ನೇಲೆ ಮತ್ತು ನೆಲೆ ಎಂಬ ಎರಡು ವಿಭಾಗಗಳಲ್ಲಿ ಲೇಖಕರು ಅನೇಕ ವಿಷಯಗಳನ್ನು ವಿವರಿಸಿದ್ದಾರೆ. ಜನಪದದ ಅಧ್ಯಯನದ ಸ್ವರೂಪ-ವ್ಯಾಪ್ತಿ ಜನಪದ ಮತ್ತು ಇತರ ವಿಜ್ಞಾನಗಳು, ಜನಪದ ಕ್ಷೇತ್ರಕಾರ್ಯ ವಿಧಾನಗಳು, ಸಿದ್ಧಾಂತಗಳು ಮೊದಲ ಭಾಗದಲ್ಲಿವೆ. ಎರಡನೆಯ ಭಾಗದಲ್ಲಿ ಜನಪದದ ಮೂಲಭೂತ ತತ್ವಗಳನ್ನು ಐದು ದೃಷ್ಟಿ ಕೋನಗಳಿಂದ ವಿಶ್ಲೇಷಣೆ ಮಾಡಿದ್ದಾರೆ. ಈ ಎಲ್ಲಾ ಲೇಖನಗಳು ಕೃತಿಕಾರರ ಆಳವಾದ ಅಧ್ಯಯನವನ್ನು ಅವರ ಚಿಂತನ ಶೀಲತೆಯನ್ನು ಓದುಗರಿಗೆ ಮನದಟ್ಟು ಮಾಡಿಕೊಡುತ್ತೇವೆ. ತಾವು ಓದಿದ್ದನ್ನು ಕನ್ನಡದಲ್ಲಿ ಬರವಣಿಗೆ ಕೆಲವು ಕಿಷ್ಟವಾಗುತ್ತೇದೆ. ಉದಾ: ಆ ಇವುಗಳ ಹುಟ್ಟು ರೂಪಣ ಸ್ಥಿರೀಕರಣ

ಮತ್ತು ಚಲಾವಣೆಗಳಿಗೆ ಕಾರಣವಾದ ಸಾಮಾಜಿಕ ನಿರ್ಬಂಧ ಶಕ್ತಿಗಳು ಯಾವುವು ಇಂಥ ಸಾಲುಗಳಲ್ಲಿ ಅಲ್ಲಲ್ಲಿ ತಲೆ ಹಾಕುವ ದೋಷವನ್ನು ಬಿಟ್ಟರೆ ಈ ಕೃತಿ ತುಂಬ ಉಪಯುಕ್ತವಾದದು ಎನ್ನಬಹುದು.

**ಪ್ರಮುಖ ಜನಪದೀಯ ಆಚರಣೆಗಳು ಮತ್ತು ಸಂಪ್ರದಾಯಗಳು**

ವೇದಾವತಿ ನದಿ ತೀರದಲ್ಲಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿ ಬೆಳೆದುಬಂದಿದೆ. ಕಲೆ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಮತ್ತು ರಾಜಕೀಯಗಳಿಂದ ಆರ್ಥಿಕತೆಯಿಂದ ಸಾಮಾಜಿಕ ಅಂಶಗಳು ಅಗತ್ಯತೆ ಅನುಗುಣವಾಗಿ ಬೆಳೆದಿದೆ.ಒಂದು ಸ್ಥಳದ ಭೌಗೋಳಿಕ ವೈಶಿಷ್ಟರ್ಯ ಅಸಾಮಾನ್ಯತೆಯನ್ನು ಗಮನಿಸಿಕೊಂಡು ಸ್ಥಳ ಐತಿಹ್ಯಗಳು ಹುಟ್ಟಿಕೊಂಡಿರುತ್ತೇವೆ. ಇವು ಸ್ಥಳ ಮಹಿಮೆ ವ್ಯಕ್ತಿ ವಿಶೇಷಗಳು ಸಂಪ್ರದಾಯಗಳು ಮತ್ತು ಘಟನೆಗಳನ್ನು ತಿಳಿಸುತ್ತದೆ. ಇವು ಸಂಕ್ಷಿಪ್ತ ರೂಪವಾಗಿದ್ದು ಗದ್ಯಾತ್ಮಕವಾಗಿರುವ ಈ ಸ್ಥಳ ಐತಿಹ್ಯಗಳು ಒಂದು ನಿರ್ದಿಷ್ಟ ಸ್ಥಳ ಬದ್ಧವಾಗಿರುತ್ತದೆ. ವ್ಯಕ್ತಿಗಳೊಂದಿಗೆ ಸ್ಥಳಕ್ಕೆ ಹೆಚ್ಚಿನ ಮಹತ್ವವಿದೆ. ಆದರೆ ಇವು ಹುಟ್ಟಿಕೊಂಡ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಆದರೆ ಆಸ್ಥಳಕ್ಕೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಗೆ ಸೀಮಿತವಾಗಿರುತ್ತೇವೆ.

**ಗಂಗಮ್ಮನ ಪೂಜೆ:**

ಜಲವನ್ನು ಪವಿತ್ರ ಎಂದು ಭಾವಿಸಿರುವ ವಿವಿಧ ಸಮುದಾಯಗಳು ನೀರನ್ನು ಗಂಗಾ ದೇವಿಯ ಪ್ರತೀಕವೆಂದು ಭಾವಿಸಿ ಆಕೆಯ ಪೂಜೆಯನ್ನು ಕೆಲ ವಿಶೇಷ ದಿನಗಳಂದು ಆಚರಿಸಲಾಗುತ್ತದೆ. ಊರಿನ ಗ್ರಾಮದ ದೈವಗಳ ಜಾತ್ರೆ ಉತ್ಸವ ಹಬ್ಬ ಹರಿದಿನಗಳಲ್ಲಿ ಆ ದೈವಗಳೊಂದಿಗೆ ಕೆರೆಯ ಬಳಿ ಹೋಗಿ ಅಲ್ಲಿಯ ನದಿಯ ದಡದಲ್ಲಿ ಕುಳ್ಳಿರಿಸಿ ಆ ದೈವದ ಎಲ್ಲಾ ಪರಿಕರಗಳನ್ನು ಶುಭ್ರಗೊಳಿಸಿ ವಿಶೇಷ ಪೂಜೆ ಸಲ್ಲಿಸುವುದನ್ನು ಗಂಗೆ ಪೂಜೆ ಇಲ್ಲವೇ ಹೊಳೆ ಪೂಜೆ ಎಂದು ಕರೆಯಲಾಗುತ್ತದೆ.

**ಋತುಮತಿ ಆಚರಣೆ:**

ಪರಿಸರದಲ್ಲಿ ಚಾಲ್ತಿಯಲ್ಲಿರುವ ನದಿ ಅಥವಾ ಕೆರೆಗೆ ಸಂಬAಧಿಸಿದ ಆಚರಣೆಗಳಲ್ಲಿ ಇದು ಮತ್ತೊಂದು ಪ್ರಮುಖ ಆಚರಣೆಯಾಗಿದ್ದು. ಇದನ್ನು ವೇದಾವತಿ ನದಿ ದಡದ ಎಲ್ಲಾ ಗ್ರಾಮಗಳಲ್ಲಿಯೂ ಆಚರಿಸಲಾಗುತ್ತದೆ. ಋತುಮತಿಯಾಗದೆ ಇರುವ ಬಾಲಕಿಯರು ೩೧ ದಿನಗಳ ಕಾಲ ಬಗೆ ಬಗೆಯ ಮೊಸರೊಡೆ, ತುಪ್ಪದವಡೆ, ಸಿಎಡೆ, ಕಾರದ್ದುಡೆ ಮೊದಲಾದ ೩೧ ರೀತಿಯ ಎಡೆಗಳನ್ನು ಮಾಡಿಕೊಂಡು ನದಿ ಅಥವಾ ಕೆರೆಗಳಿಗೆ ಬ್ರಾಹ್ಮಿ ಮುಹೂರ್ತದಲ್ಲಿ ಹೋಗಿ ಪೂಜಿಸಿಕೊಂಡು ಬಂದರೆ ಗಂಗಮ್ಮ ತಾಯಿ ಕೃಪೆಯಿಂದ ಒಳ್ಳೆಯದಾಗುತ್ತದೆ ಎಂದು ನಂಬಿದ್ದಾರೆ. ಇದರ ಹಿಂದೆ ಫಲವಂತಿಕೆಯ ಆಶಯ ಎದ್ದು ಕಾಣುತ್ತದೆ ಎಂಬುದು ಜನಪದ ನಂಬಿಕೆಯಾಗಿದೆ.

**ಮಣೇವು ಆಡುವುದು:**

ಬೇಡರ ಪ್ರತಿಯೊಬ್ಬರಲ್ಲೂ ಮಣೇವು ಆಡುವ ಸಂಪ್ರದಾಯವಿದೆ. ಬಾಳೆಹಣ್ಣು ಮತ್ತು ಬೆಲ್ಲವನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಸಮಾನ ಪ್ರಮಾಣದಲ್ಲಿ ಬೆರೆಸಿ ನೆಲದ ಮೇಲೆ ಬಟ್ಟೆಯನ್ನು ಇಡುತ್ತಾರೆ. ಅದರ ಸುತ್ತ ದಾಸರ ಬೆಡಗಿನ ವ್ಯಕ್ತಿಗಳು ತಮಟೆಯ ಶಬ್ಧಕ್ಕೆ ಸರಿಯಾಗಿ ಹೆಜ್ಜೆ ಹಾಕಿ ಕುಣಿಯುತ್ತ ಸುತ್ತುತ್ತಾರೆ. ತಮಟೆ ಶಬ್ಧ ನಿಲ್ಲುತ್ತಿದ್ದಂತೆ ನಾ ಮುಂದು ತಾ ಮುಂದು ಎಂದು ಮಂಡಿಯೂರಿ ಕೈಯಲ್ಲಿ ಮುಟ್ಟದಂತೆ ಬಾಯಿಯಲ್ಲಿಯೇ ತಿನ್ನುತ್ತಾರೆ. ಕೆಲವು ಕಡೆ ಕಂಬಳಿ ಹಾಸಿಯು ಮಣೇವು ಆಡುತ್ತಾರೆ.

**ವಾಸೆ ಎಂದರೆ:**

ದೇವರ ಎದುರು ದುಂಡಾದ ಕಲ್ಲು ಇದ್ದು ಅದರ ಸುತ್ತ ಮಡುವಿನ ರೀತಿ ಇರುತ್ತದೆ. ಆ ಗುಂಡಿನ ಮೇಲೆ ಕುರಿಮರಿಯನ್ನು ಅಂಗಾತ ಹಿಡಿದು ಅದರ ಕತ್ತನ್ನು ಕೊಯ್ಯುತ್ತಾರೆ. ಈ ಪದ್ಧತಿಗೆ ವಾಸೆ ಕೊಯ್ಯುವುದು ಎನ್ನುತ್ತಾರೆ. ಈ ವಾಸೆ ಆಚರಣೆಯು ಮಾನವನ ಆದಿಮ ಸ್ಥಿತಿಯನ್ನು ನೆನಪಿಸುವ ರೀತಿಯಲ್ಲಿದೆ. ಹೀಗೆ ಗೋನೂರಿನವರು ವಾಸೆ ಕೊಯ್ಯುವ ವೇಳೆಗೆ ಬೆಳಗಿನ ಜಾವ ಆಗಿರುತ್ತದೆ. ಆಗ ಸಲ್ಲಘಟ್ಟೆಯಲ್ಲಿ ಬೇಡರು, ಮೂರು ಮಂದಿ ನಾಯಕರು, ಏಳು ಮಂದಿ, ಹಿರಿಯರು, ದೇವರ ಎತ್ತುಗಳನ್ನು ಎತ್ತಗಳನ್ನು ಒಡಿದುಕೊಂಡು ಅಲ್ಲಿಂದ ದೇವರ ಸಮಾಧಿ ಹತ್ತಿರ ಮೆರವಣಿಗೆ ಹೊರಡುತ್ತಾರೆ. ಆಗ ದಾರಿಯ ಮಧ್ಯದಲ್ಲಿ ಗೊಲ್ಲರ ಹಟ್ಟಿಯಿಂದ ಗೊಲ್ಲರು ಹೊಸ ಕೊಳಗದಲ್ಲಿ ಅಂಬಲಿ ತರುತ್ತಾರೆ. ಆಗ ಬಸಗೆ ಅಂಬಲಿ ಆಚರಣೆ ನಡೆಯುತ್ತದೆ.

**ಬಸಗೆ ಅಂಬಲಿ ಆಚರಣೆ:**

ಬಸಗೆ ಅಂಬಲಿ ಎಂದರೆ ಗೋಧಿಯ ಅಂಬಲಿಯನ್ನು ಬೊಗುಸೆಯಲ್ಲಿ ಸೇವಿಸುವುದು ಎಂದರ್ಥ. ಈ ಅಂಬಲಿಯನ್ನು ಕಾಡುಗೊಲ್ಲರ ಹೆಣ್ಣು ಮಕ್ಕಳು ಬೇಡರ ಏಳು ಮಂದಿ ಹಿರಿಯರಿಗೆ ಬಗಸೆಯಲ್ಲಿ ಹಾಕುತ್ತಾರೆ. ಪಶುಪಾಲಕ ಸೋದರ ಸಮುದಾಯಗಳಾದ ನಾಯಕರಿಗೆ ಕಾಡುಗೊಲ್ಲರಿಗೆ ಪ್ರಾಚೀನ ಕಾಲದಲ್ಲಿ ನಡೆದ ಸಂಘರ್ಷದ ಪ್ರತೀಕ. ಈ ಬಸಗೆ ಅಂಬಲಿ ಆಚರಣೆ ಪಾಪನಾಯಕನು ತನಗೆ ಸಾಕಲು ಧನಕರಗಳು ಇಲ್ಲವೆಂದು ಕಾಡುಗೊಲ್ಲರ ರಾಸುಗಳನ್ನು ಹೊಡೆದುಕೊಂಡು ಬಂದಿರುತ್ತಾನೆ ಎಂದು ಕಥೆಯಿದೆ. ಅಲ್ಲದೆ ಕಾವಲಿನ ವಿಷಯಕ್ಕೆ ಗೊಲ್ಲರಿಗೂ ಮತ್ತು ಪಾಪನಾಯಕನಿಗೂ ತಕರಾರು ಇರುತ್ತದೆಂದು ಹೇಳುತ್ತಾರೆ. ಮುಖ್ಯವಾದ ವಿಷಯವೆಂದರೆ ಪಾಪನಾಯಕನ ಕಥೆಯಲ್ಲಿ ಪ್ರಸ್ತಾಪವಾಗುವಂತೆ ಜಗಳೂರು ದೊರೆ ಗೊಲ್ಲರಿಂದ ಪಾಪನಾಯಕನಿಗೆ ವಿಷ ಹಾಕಿಸಿ ಸಾಯಿಸುವ ಪ್ರಯತ್ನ ಮಾಡಿರುತ್ತಾನೆ. ಕಾಡುಗೊಲ್ಲರ ಸಹಾಯದಿಂದ ಪಾಪನಾಯಕನನ್ನು ಒಳಗೊಂಡAತೆ ಬೇಡರ ಏಳು ಮಂದಿಯನ್ನು ಗೊಲ್ಲರ ಮೂಲಕ ಊಟಕ್ಕೆ ಕರೆಯಿಸಿ ಏಳು ಸೋರೆ ಅಂಬಲಿಯಲ್ಲಿ ಒಂದರಲ್ಲಿ ವಿಷ ಹಾಕಿ ಬೇಡರಿಗೆ ಬಡಿಸುತ್ತಾರೆ. ಇದನ್ನು ಅರಿತ ಪಾಪನಾಯಕ ತನ್ನವರಿಗೆ ಮೊದಲ ಬಗಸೆ ಅಂಬಲಿಯನ್ನು ಕುಡಿಯಿರಿಯೆಂದು ಸನ್ನೆ ಮಾಡುತ್ತಾನೆ. ಸಾಲಾಗಿ ಊಟಕ್ಕೆ ಕುಕ್ಕುರುಗಾಲಿನಲ್ಲಿ ಕುಳಿತ ಅವರು ಪಾಪನಾಯಕ ಹೇಳಿದಂತೆಯೇ ಮಾಡುತ್ತಾರೆ. ಆಗ ಯಾರು ಸಾಯುವುದಿಲ್ಲ. ಈ ಪವಾಡವನ್ನು ಪಾಪನಾಯಕ ಮಾಡಿದ ಪ್ರತೀಕವಾಗಿ ಅವನ ದಿವಸ ಕಾಲ ಮಾಡುವ ಈ ಸಂದರ್ಭದಲ್ಲಿ ಬಸಗೆ ಅಂಬಲಿ ಆಚರಣೆ ಆಚರಿಸುತ್ತಾರೆ. ಗೊಲ್ಲರು ಏಳು ಹೊಸ ಮಣ್ಣಿನ ಸೋರೆಗಳಲ್ಲಿ ಅಂಬಲಿ ತಂದು ಏಳು ಮಂದಿ ಹಿರಿಯರಿಗೆ ಗೊಲ್ಲರ ಏಳು ಜನ ಹೆಣ್ಣು ಮಕ್ಕಳು ಅಂಬಲಿಯನ್ನು ಬಗಸೆಯಲ್ಲಿ ಹಾಕುತ್ತಾರೆ. ಈ ಆಚರಣೆಯಿಂದ ನಾಯಕರು ಮತ್ತು ಕಾಡುಗೊಲ್ಲರ ಮೂಲಕ ಸೋದರ ಸಂಬAಧಿ ಸಮುದಾಯಗಳ ದನಕರುಗಳ ಸಂಬAಧವಾಗಿ ಇವರ ನಡುವೆ ಸಂಘರ್ಷ ನಡೆದು ಬೇರೆಯಾದರೆಂದು ತಿಳಿದುಬರುತ್ತದೆ. ಈ ಎರಡು ಸಮುದಾಯಗಳಲ್ಲಿ ಜಮೀನಿಗಿಂತ ಪಶು ಸಂಪತ್ತು ಹೆಚ್ಚು ಎಂದು ಹೇಳಬಹುದು.

**ಮುತ್ತಿನ ಕಳಸ ತರುವುದು:**

ಬಸಗೆ ಅಂಬಲಿಯ ಆಚರಣೆ ಮುಗಿದ ನಂತರ ಬೇಡಗಂಪಣ ಮೆರವಣಿಗೆ ಮುಂದುವರೆಯುತ್ತದೆ. ಇನ್ನೇನು ಪಾಪನಾಯಕನ ಸಮಾದಿ ಒಂದು ಕಿಲೋ ಮೀಟರ್ ಇದೆ ಎನ್ನುವಷ್ಟರಲ್ಲಿ ಜಗಳೂರು ಗೌಡರ ಮನೆಯಿಂದ ಮುತ್ತೆöÊದೆಯರು ಮುತ್ತಿನ ಆರತಿ ಅಥವಾ ಕಳಸ ತರುತ್ತಾರೆ. ಬೇಡಗಂಪಣದ ಎದುರು ಬಂದು ಪಾಪನಾಯಕ ದೇವರಿಗೆ ಮತ್ತು ಪೂಜಾರಿಗೆ ಪೂಜೆ ಮಾಡಿ ಹೋಗುತ್ತಾರೆ. ಹಿಂದೆ ಪಾಪನಾಯಕ ಜಗಳೂರು ಗೌಡರಿಗೆ ತುಂಬಾ ತೊಂದರೆ ಕೊಟ್ಟಿರುತ್ತಾರೆ. ಅದಕ್ಕಾಗಿ ಈ ಆಚರಣೆಯಲ್ಲಿ ಅವನಿಗೆ ಮುತ್ತಿನ ಕಳಸ

ಹಿಡಿಯುತ್ತಾರೆ ಎಂದು ಕೆಲವರು ಹೇಳುತ್ತಾರೆ. ಆದರೆ ಜಗಳೂರು ಪಾಪನಾಯಕನ ಕಥೆಯಲ್ಲಿ ಪ್ರಸ್ತಾಪವಾಗುವಂತೆ ಇವನ ಸಾವಿಗೆ ಕಾರಣರಾದ ಜಗಳೂರು ದೊರೆಗಳು ತಮ್ಮ ಪಾಪದ ಪ್ರಾಯಶ್ಚಿತ್ತವಾಗಿ ಈ ಆಚರಣೆ ಮಾಡಬಹುದು ಅನ್ನಿಸುತ್ತದೆ.

**ನೀಲ್‌ಮರ ಸುತ್ತುವುದು:**

ಹಾಗೆಯೇ ಮುಂದೆ ಹೋದರೆ ಒಂದು ಮರವಿದ್ದು ಅದರ ಬುಡದಲ್ಲಿ ಒಂದು ವೀರಗಲ್ಲು ಇದೆ. ಆ ಮರವನ್ನು ಪಾಪದೇವರು ಮತ್ತು ಇಡೀ ಬೇಡಗಂಪಣ ಸುತ್ತುತ್ತದೆ. ಇದರ ಕಾರಣ ತಿಳಿದಿಲ್ಲ. ಬಹುಶಃ ಹಿಂದೆ ಪಶುಪಾಲನೆ ಮಾಡುವ ಸಂದರ್ಭದಲ್ಲಿ ಪಾಪನಾಯಕ ಈ ಮರದ ನೆರಳಿನಲ್ಲಿ ವಿಶ್ರಾಂತಿ ಪಡೆಯಲು ತನ್ನ ರಾಸುಗಳನ್ನು ತರುಬುತ್ತಿದ್ದನು ಎಂದು ಊಹಿಸಬಹುದು. (ತೆಲುಗಿನಲ್ಲಿ ನೀಲ/ ನೀಲ್ ಎಂದರೆ ನೆರಳು ಎಂದರ್ಥ) ಹಿಂದೆ ಈ ಮರವನ್ನು ದೇವರು ಮತ್ತು ದೇವರ ಎತ್ತುಗಳು ಸುತ್ತುವಾಗ ಆ ಮರವು ಸಹ ಸುತ್ತುತ್ತಿತ್ತು ಎಂದು ಜನರು ಹೇಳುತ್ತಾರೆ.

**ವಾಸೆ ಕೊಯ್ಯುವುದು:**

ವಾಸಿ ಎಂದರೆ ಅಚ್ಚಕೆಂಡು ಇಲ್ಲವೇ ಕಪ್ಪು ಬಣ್ಣದ ಹೋತವನ್ನು ಬಾಯಿ ಬತದಲ್ಲಿ ಅಂದರೆ ಬಾಯಿಗೆ ಬಟ್ಟೆ ಕಟ್ಟಿಕೊಂಡು ಸೂರ್ಯೋದಯಕ್ಕೂ ಮುನ್ನವೇ ಅಂಗಾತ ಮಲಗಿಸಿ ಚೂರಿಯಿಂದ ಕತ್ತು ಕುಯ್ಯುತ್ತಾರೆ. ಇದು ಒಂದು ರೀತಿ ನೆಲಗಾವು ಪ್ರಕ್ರಿಯೆಯನ್ನು ಹೋಲುತ್ತದೆ. ಹೆಣ್ಣು ದೇವತೆಗಳಿಗೆ ನಡೆಯುವ ಬಲಿಯನ್ನು ಗಾವು ಎಂದು ಗಂಡು ದೇವರಿಗೆ ಬಲಿ ನೀಡುವ ವಿಧಾನವನ್ನು ವಾಸೆ ಎಂದು ಕರೆದಿದ್ದಾರೆ. ವಾಸೆ ಮಾಂಸವನ್ನು ಅಣ್ಣತಮ್ಮಂದಿರೇ ಹಂಚಿಕೊಳ್ಳಬೇಕು. ಬೇರೆ ಯಾರು ಮುಟ್ಟುವ ಹಾಗಿಲ್ಲ. ಇದನ್ನು ಬಂಗಾರದ ತುಂಡು ಎಂದು ಕರೆದು ಊಟವಾದ ನಂತರ ಮೂಳೆಗಳನ್ನು ಬಿಸಾಡುವುದಿಲ್ಲ. ನಾಯಿಗಳು ಮುಟ್ಟಿ ಅಪವಿತ್ರ ಮಾಡುತ್ತವೆ ಎಂದು ಒಂದು ಗುಂಡಿ ತೆಗೆದು ಅದರಲ್ಲಿ ಹೂತು ಬಿಡುತ್ತಾರೆ. ಮ್ಯಾಸರಲ್ಲಿ ಇದೊಂದು ಪವಿತ್ರ ಸಂಪ್ರದಾಯ ಎಂಬ ನಂಬಿಕೆ ಇದೆ.

**ಕಾಸು ಮೀಸಲು:**

ಕಾಸು ಎಂದರೆ ದುಡ್ಡು. ಅದು ಹಿಂದೆ ನೋಟಿನ ರೂಪದ್ದಾಗಿರದೆ ನಾಣ್ಯದ ರೂಪದ್ದಾಗಿತ್ತು. ಆದರೆ ಈಗ ನಾಣ್ಯ ನೋಟು ಎರಡರಲ್ಲಿ ಯಾವುದಾದರೂ ಸರಿ ಅದು ಕಾಸಾಗಿರಬೇಕು. ಅದನ್ನು ಎಲೆ ಅಡಿಕೆ ಜೊತೆ ಇಟ್ಟು ದೇವರಿಗೆ ಕೊಡುವುದು ಅದು ಪೂಜಾರಿಗಳಿಗೆ ದಾಸಯ್ಯಗಳಿಗೆ ಸಲ್ಲುತ್ತದೆ. ಮೀಸಲು ಎಂದರೆ ಬೆಣ್ಣೆ ಮೀಸಲು. ಒಲೆ, ಪಾತ್ರೆ ಎಲ್ಲವನ್ನು ಸ್ವಚ್ಛ ಮಾಡಿಕೊಂಡು ಬಾಯಿಗೆ ಬಟ್ಟೆ ಕಟ್ಟಿಕೊಂಡು ಹಾಲನ್ನು ಕರೆದು ಕಾಯಿಸಿ ಹೆಪ್ಪು ಹಾಕಿ ಅದರಿಂದ ತೆಗೆದ ಬೆಣ್ಣೆಯನ್ನು ದೇವರಿಗೆ ಮೀಸಲು ಎಂದು ಕೊಡುತ್ತಾರೆ. ಪೂಜಾರಿಗಳು ಉಪವಾಸವಿದ್ದುಕೊಂಡು ಒಂದೊತ್ತು ಕಾಲ್ನಡಿಗೆಯಲ್ಲಿ ಬಂದು ದೇವರಿಗೆ ಅರ್ಪಿಸುತ್ತಾರೆ.

**ಗಾವು ಸಿಗಿಯುವುದು:**

ಅಚ್ಚ ಕಪ್ಪು ಅಥವಾ ಬಿಳಿಯ ಬಣ್ಣದ ಹೋತು ಮರಿಯನ್ನು ತಂದು ಗಂಟಲನ್ನು ಹಲ್ಲುಗಳಿಂದಲೇ ಕಚ್ಚಿ ಕಚ್ಚಿ ಅದರ ರಕ್ತ ಮಾಂಸಗಳನ್ನು ಕುಡಿದು ತಿನ್ನುವ ಭೀಕರವಾದ ಪ್ರಕ್ರಿಯೆಯೇ ಗಾವು ಸಿಗುವುದು. ಮಾರಿ ಹಬ್ಬದ ಸಂದರ್ಭದಲ್ಲಿ ಇದು ಪ್ರಧಾನವಾದ ಕೆಲಸವಾಗಿದೆ. ಈ ಕ್ರಿಯೆಯನ್ನು ನೆರವೇರಿಸುವವರನ್ನು ಪೋತರಾಜರು ಎನ್ನುತ್ತಾರೆ. ಇವರು ಹೋತದ ರೀತಿಯಲ್ಲಿ ಮುಖವನ್ನು ಅಲಂಕರಿಸಿಕೊAಡು ಹೋತವನ್ನು ಸಿಗಿಯುತ್ತಾರೆ. ಆ ಕಾರಣದಿಂದಲೇ ಇವರಿಗೆ ಪೋತ ನಾಯಕರೆಂದು ಹೆಸರು ಬಂದಿರಬೇಕು ಎನಿಸುತ್ತದೆ. ಹಿಂದೆ ಆನೆ,

ಒಂಟೆ, ಕೋಣ, ಹಂದಿಗಳನ್ನೇ ಗಾವು ಮರಿಯಾಗಿ ಬಳಸುತ್ತಿದ್ದರು. ಈಗ ಅದು ಕೇವಲ ಹೋತದ ಮರಿಗೆ ಬಂದು ನಿಂತಿದೆ. ಈ ಬಲಿ ಪ್ರಕ್ರಿಯೆ ಕೃಷಿ ಫಲವತ್ತಾಗಿ ಮಾಡುವ ಆಚರಣೆಯಾಗಿದೆ.

ಮನೆದೇವರುಗಳು

ಬೇಡ ನಾಯಕರು ತಮ್ಮ ಸಮುದಾಯದ ಉಳಿವಿಗಾಗಿ ಹೋರಾಡಿ ತಮ್ಮ ಪ್ರಾಣವನ್ನೇ ಅರ್ಪಿಸಿ ತಮ್ಮ ಸಮುದಾಯಕ್ಕೆ ಒಂದು ಸಾಂಸ್ಕೃತಿಕ ಅನನ್ಯತೆಯನ್ನು ತಂದುಕೊಟ್ಟ ವೀರರನ್ನೇ ಮನೆದೇವರುಗಳನ್ನಾಗಿ ಮಾಡಿಕೊಂಡಿದ್ದಾರೆ. ಆಯಾ ದೇವರುಗಳು ಇರುವ ಜಾಗದಲ್ಲಿ ಜಾತ್ರೆಗಳಾದರು ಇವರು ಮನೆಗಳಲ್ಲಿಯೇ ಆ ದೇವರ ಜಾತ್ರೆಯ ಸಂಭ್ರಮವನ್ನು ಆಚರಿಸುತ್ತಾರೆ. ಶ್ರೀ ಓಬಳೇಶ್ವರ, ಗಾದ್ರಿ ಪಾಲನಾಯಕ, ಜಗಳೂರಜ್ಜಯರ ಗಾಟನಾಯಕ, ದಡ್ಡಿ ಸೂರನಾಯಕ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಬೋಸೆದೇವರು, ಬೋರೇದೇವರು, ಮಾರಮ್ಮ ಮುಂತಾದವರು ಇವರ ಮನೆದೇವರುಗಳಾಗಿ ಆಚರಿಸುತ್ತಾರೆ. ಪೆಟ್ಟಿಗೆ ದೇವರುಗಳ ಪೂಜೆಯ ಜೊತೆಗೆ ಬೇಡ ಸಮುದಾಯದ ಸಾಂಸ್ಕೃತಿಕ ವೀರರೆಂದೇ ಖ್ಯಾತರಾಗಿರುವ ಯರಮಂಚಿನಾಯಕ, ಗಾದ್ರಿಪಾಲನಾಯಕ, ಜಗಳೂರು ಪಾಪನಾಯಕ, ಯರಗಟನಾಯಕ, ದಡ್ಡಿ ಸೂರನಾಯಕ ಇವರನ್ನು ಪ್ರಮುಖವಾಗಿ ಆರಾಧ್ಯ ದೈವಗಳನ್ನಾಗಿ ಮಾಡಿಕೊಂಡು ಸಾಂಸ್ಕೃತಿಕ ಆಚರಣೆಗಳಿಗೆ ಒಳಪಡಿಸಿಕೊಂಡಿದ್ದಾರೆ.

ಚುಟಿಕೆ ಹಾಕುವುದು

ಸೂಜಿಯನ್ನು ಕಾಯಿಸಿ ಅಥವಾ ಬಳೆಯ ಚೂರನ್ನು ಕಾಯಿಸಿ ಅಥವಾ ಬೇವಿನ ಕಡ್ಡಿಯಿಂದ ನವಜಾತ ಶಿಶುವಿನ ಹೊಟ್ಟೆಯ ಮೇಲೆ ಚುಟಿಕೆ/ ಬರೆ ಹಾಕುತ್ತಾರೆ. ಚುಟುಕೆ ಹಾಕುವುದರಿಂದ ಹೊಟ್ಟೆ ಉಬ್ಬರ ಆಗುವುದಿಲ್ಲ ಮತ್ತು ಜ್ವರ ಬಂದರೆ ಕಡಿಮೆಯಾಗುತ್ತದೆ. ಮುಂದೆ ಯಾವುದೇ ರೋಗ ಮಗುವಿಗೆ ತಾಗುವುದಿಲ್ಲ. ಜ್ವರ ಬಂದಾಗ ಚುಟಿಕೆ ಹಾಕಿದರೆ ತಕ್ಷಣವೇ ಮಗುವಿನ ಮೈ ಬೆವರುತ್ತದೆ. ಚುಟಿಕೆಯನ್ನು ಮಗುವಿನ ಕಿವಿ, ನೆತ್ತಿ, ಹಣೆ, ಕಣ್ಣ ಹುಬ್ಬಿನ ಮೇಲೆ ನರಗಳಿಗೆ ಕಾದ ಸೂಜಿ ಅಥವಾ ಕಾದ ಬಳೆಯ ಚೂರಿನಿಂದ ಸುಡುವುದರಿಂದ ಮೈಗೆ ಶಾಖ ತಗಲಿ ಮೈ ಬೆವೆತು ಜ್ವರ ವಾಸಿಯಾಗುತ್ತದೆಂದು ಜನಪದರು ನಂಬಿದ್ದಾರೆ.

ಓಕುಳಿ ಚೆಲ್ಲುವುದು

ಮಗು ವಿಪರೀತ ಅಳುತ್ತಿದ್ದರೆ ಮನೆಯ ಯಜಮಾನಿ ಒಂದು ಚೆಂಬು ಅರಿಶಿಣದ ನೀರು ಕಲಿಸಿ ಒಂದು ತಟ್ಟೆಯಲ್ಲಿ ಹಾಕಿ ಅದರಲ್ಲಿ ಒಂದು ಎಲೆ ಒಂದು ಅಡಿಕೆ ಒಂದು ಮುಟಿಗೆ ಅನ್ನವನ್ನು ಮಗುವಿಗೆ ನಿವಾಳಿಸಿ ತೆಗೆದು ಮೂರು ದಾರಿ ಕೂಡುವಲ್ಲಿ ಹಾಕುತ್ತಾರೆ/ ಚೆಲ್ಲುತ್ತಾರೆ. ಇದನ್ನೇ ಓಕುಳಿ ಚೆಲ್ಲುವುದು ಎಂದು ಆಡುಮಾತಿನಲ್ಲಿ ಹೇಳುತ್ತಾರೆ. ಹೀಗೆ ಮಾಡಿದರೆ ಮಗುವಿಗೆ ತಗಲಿರುವ ದೃಷ್ಟಿ ಕಡಿಮೆಯಾಗಿ ಮಗು ಅಳುವುದನ್ನು ನಿಲ್ಲಿಸುತ್ತದೆ ಎಂಬ ನಂಬಿಕೆ ಇದೆ.

ಉಪಸಂಹಾರ:

ಒಟ್ಟಾರೆಯಾಗಿ ಜಾನಪದ ಕ್ಷೇತ್ರವು ಬಹು ವಿಸ್ತಾರವೂ, ವ್ಯಾಪಕವೂ ಆದ ವಿಶೇಷ ಜ್ಞಾನಕ್ಷೇತ್ರ, ಹಾಗಾಗಿ ಇಲ್ಲಿ ಉಳಿದ ಎಲ್ಲಾ ಕ್ಷೇತ್ರಗಳಿಗಿಂತ ಭಿನ್ನ ಮತ್ತು ವಿಶಿಷ್ಟ ಮನುಷ್ಯನಷ್ಟೇ ಹಳೆಯದಾದ ಮಾನವ ಬದುಕಿನ ಸಮಸ್ತ ಮುಖಗಳ ಸಮಷ್ಟಿಯ ಸೃಷ್ಟಿಯಾಗಿದೆ ಕಾರಣ ನಮ್ಮನ್ನು ನಾವು ಅರಿತುಕೊಳ್ಳಲು ಮತ್ತು ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೂ ನಡೆದು ಬಂದ ದಾರಿಯ ಬಗೆಗೆ ತಿಳಿದುಕೊಳ್ಳಲು ಜಾನಪದ ಅಧ್ಯಯನ ಅತ್ಯಗತ್ಯ. ಪ್ರಸ್ತುತ ದಿನಗಳು ಉರುಳಿದಂತೆಲ್ಲಾ ಮಾನವನ ಜೀವನ ಬದಲಾಗುತ್ತಿದೆ. ಸಾಮಾನ್ಯವಾಗಿ ರಥೋತ್ಸವ, ಸಿಡಿಉತ್ಸವ, ಹೋಳಿಹಬ್ಬ, ಕಾರಹುಣ್ಣಿಮೆ, ಊರಮಾರಮ್ಮನ ಜಾತ್ರೆ ಇನ್ನು ಮುಂತಾದ ಕಡೆ ಎಲ್ಲಾ ಕೋಮಿನವರು ಸೇರಿ ವಿವಿಧತೆಯಲ್ಲಿ ಏಕತೆಯನ್ನು ತೋರುತ್ತಾರೆ. ಆದರೆ ಪ್ರಸ್ತುತ ಅಧ್ಯಯನವೂ ಅಂತಿಮವಲ್ಲ. ಏಕೆಂದರೆ ಈ ಅಧ್ಯಯನದಲ್ಲಿ ವಿವರಿಸಿದ ವಿವಿಧ ಹಂತದ ಶಿಲಾಯುಗದ ನೆಲೆಗಳನ್ನು ಕೇವಲ ಸ್ಥಳ ಪರಿಶೋಧನೆಯಿಂದ ಮಾತ್ರ ಗುರುತಿಸಿ ಅಲ್ಲಿ

ದೊರೆತ ಅವಶೇಷಗಳನ್ನು ವಿವರಿಸಲಾಗಿದೆ. ಈ ಪರಿಸರದಲ್ಲಿ ಇತ್ತೀಚಿನ ದೇವಾಲಯಗಳ ಬಗ್ಗೆ ಅಧ್ಯಯನ ಮಾಡುವ ಅಗತ್ಯವಿದೆ. ನದಿಯನ್ನು ಕುರಿತು ಜನಪದ ಚರಿತ್ರೆ ಕಟ್ಟುವ ನೆಲೆಯಲ್ಲಿಯೂ ಅಧ್ಯಯನ ಮಾಡುವ ಅವಶ್ಯಕತೆಯಿದೆ. ನದಿಯ ಬಹುಭಾಗ ಸೀಮೆ ಜಾಲಿಗಿಡಗಳಿಂದ ಆವೃತವಾಗಿದೆ. ಅವುಗಳನ್ನು ಕಡಿದು ಸಂರಕ್ಷಣೆ ಮಾಡಬೇಕು. ಅಲ್ಲಲ್ಲಿ ಚೆಕ್ ಡ್ಯಾಂ, ಕೃಷಿಹೊಂಡ, ತಡೆಗೋಡೆ ನಿರ್ಮಿಸಿದರೆ ಇದರಿಂದ ರೈತರಿಗೆ ಸಹಾಯಕ ಹಾಗೂ ಜಲ ಸಂಪತ್ತು ಮತ್ತು ಸಸ್ಯ ಸಂಪತ್ತು ವೃದ್ಧಿಯಾಗುತ್ತದೆ. ಕೆರೆಗಳನ್ನು ಕುರಿತು ಚರ್ಚಿಸುವ ಅವಶ್ಯಕತೆ ಇದೆ ಎಂದು ಹೇಳಬಹುದು.

**ಆಧಾರ ಗ್ರಂಥಗಳು:**


1. ಧರಣೇಂದ್ರಯ್ಯ ಡಿ. ಮ್ಯಾಸಬೇಡರ ಅಭಿವೃದ್ಧಿ ಜಾನಪದ ಸಮಾಜೋ ಆರ್ಥಿಕ ಅಧ್ಯಯನ, ೨೦೨೦, ಪು.ಸಂ.೧೩೭.
2. ಶಕುAತಲ ಎನ್, ಚಿತ್ರದುರ್ಗ ಪಾಳೆಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ, ೨೦೧೧, ಪು.ಸಂ.೨೦೨-೨೦೪.
3. ಲ್.ಆರ್.ಹೆಗಡೆ-ಪುರಾಣಕಥೆಗಳು; ಸುವರ್ಣ ಜಾನಪದ ಲೇಖನಗಳು, ಪು.ಸಂ.೪೭, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
4. ಪುರುಷೋತ್ತಮ ಬಿಳಿಮಲೆ, ಐತಿಹ್ಯಗಳು; ಸುವರ್ಣ ಜಾನಪದ ಲೇಖನಗಳು, ಪು.ಸಂ.೧೨೧, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
5. ಸಿದ್ದಲಿAಗಯ್ಯ- ಗ್ರಾಮದೇವತೆಗಳು, ಪು.ಸಂ.೪೨, ೨೦೦೯, ಅಂಕಿತ ಪ್ರಕಾಶನ ಬೆಂಗಳೂರು.
6. ವಿದ್ಯಾಶ್ರೀ ಎಸ್.ಹೆಚ್, ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು, ೨೦೧೦.
7. ಮಂಜುನಾಥ್ ನಾಯಕ್, ಚಿತ್ರದುರ್ಗ ಜಿಲ್ಲಾ ದರ್ಶನ ೨೦೧೫.
8. ಪಾಲಯ್ಯ, "ಚಿತ್ರದುರ್ಗದ ಐತಿಹ್ಯಗಳು ಜಾನಪದೀಯ ವಿಶ್ಲೇಷಣೆ" ಪ್ರಸಾರಾಂಗಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೭.
9. ರಾಮದಾಸರೆಡ್ಡಿ.ಎಸ್.ಜಿ., ಕೃತಿ "ಚಿತ್ರದುರ್ಗದ ಪ್ರಾಕ್ ಚಾರಿತ್ರಿಕ ಆಧ್ಯಯನ" ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯.
10. ಹೆಬ್ಬಾಲೆ ಕೆ. ನಾಗೇಶ್, "ಕಾವೇರಿ ಜಾನಪದ, ಪ್ರಸಾರಾಂಗ" ೨೦೦೫ ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ರAಗಸ್ವಾಮಿ .ಡಿ.ಟಿ, "ಚಿತ್ರದುರ್ಗಜಿಲ್ಲಾ ದೇವಾಲಯ ದರ್ಶಿನಿ", ಗಾಯಿತ್ರಿ ಪ್ರಕಾಶನ, ಚಿತ್ರದುರ್ಗ ೨೦೧೭.